ಶ್ರೀ ಕೆ. ಎಚ್. ಪಾಟೀಲ್ (ಆಹಾರ ಮತ್ತು ಅರಣ್ಯ ಮಂತ್ರಿಗಳು).—ಉತ್ತರ (ಅ) ರೇಷನ್ ಕಾರ್ಡುಗಳು ೩,೪೮,೩೨೨ (ಸೆಪ್ಟೆಂಬರ್ ೧೯೭೩ರ ವರೆಗೆ).

	ಅಕ್ಕಿ ...	೨,೪೦೦ ಟನ್ನುಗಳು
	ಗೋಧಿ ...	೪,೦೦೦ ಟನ್ನುಗಳು
	ಸಕ್ಕರೆ ...	೨೪,೦೦೦ ಕ್ವಿಂಟಾಲುಗಳು (ಅಂದಾಜಿನ ಮೇಲೆ)
(ಅ)	ಅಕ್ಕಿ ...	೫೦೦ ಗ್ರಾಂಗಳು (ಒಂದು ಯೂನಿಟ್ಟಿಗೆ)
	ಗೋಧಿ ...	೮೫೦ ಗ್ರಾಂಗಳು ,,
	ಸಕ್ಕರೆ ...	೫೦೦ ಗ್ರಾಂಗಳು ,,

(೪) ದೇಶದಲ್ಲಿ ಆಗಾಗ್ಗೆ ಅತಿವೃಷ್ಟಿ ಅನಾವೃಷ್ಟಿ ಸಂಭವಿಸುತ್ತಿರುವುದರಿಂದ ಯಾವಾಗ ಆಹಾರ ಸ್ವಾವಲಂಬನೆಯಾಗುವುದೆಂದು ಹೇಳಲು ಸಾಧ್ಯವಿಲ್ಲ. ಆದಾಗ್ಯೂ ಆಹಾರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರವು ತಕ್ಕ ಸೂಕ್ತಕ್ರಮಗಳನ್ನು ಕೈಕೊಂಡಿದೆ. ಸರ್ಕಾರದ ವಶದಲ್ಲಿರುವ ದಾಸ್ತಾನುಗಳನ್ನು ನ್ಯಾಯ ಬೆಲೆಯ ಅಂಗಡಿಗಳ ಮೂಲಕ ವ್ಯವಸ್ಥಿತ ರೀತಿಯಲ್ಲಿ ವಿತರಣೆ ಮಾಡುವುದರ ಜೊತೆಗೆ ನೆರೆಹೊರೆಯ ರಾಜ್ಯಗಳಿಂದ ಹೆಚ್ಚಾ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ತರಿಸಿ ಹಂಚುವ ಏರ್ಪಾಡು ಮಾಡಲಾಗಿದೆ.

ಮಂಣ್ಣಗನಹಳ್ಳಿ ಸುತ್ತಮುತ್ತಲಿನ ಕಾಮಗಾರಿಗಳು

೬೯. ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ).—ಮಾನ್ಯ ಕಾಮಗಾರಿ ಮತ್ತು ವಿಧ್ಯುಚ್ಛಕ್ತಿ ಮಂತ್ರಿಗಳು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ :—

(ಅ) ೧೯೭೩ ಫೆಬ್ರುವರಿ ಮಾಹೆಯಲ್ಲಿ ರಾಮನಗರದ ಡಿವಿಜ್ ಎಕ್ಸಿಕ್ಯುಟೀವ್‌ರವರು ಮಂಣ್ಣಗನ ಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಕೆಲವು ಅವಶ್ಯಕ ಕಾಮಗಾರಿಗಳನ್ನು ಪರಿಶೀಲಿಸಿದ್ದು ನಿಜವೆ ;

(ಆ) ಆವರು ಪರಿಶೀಲಿಸಿದ ಕಾಮಗಾರಿಗಳು ಯಾವ್ಯಾವು, ಈ ಬಗ್ಗೆ ಇಲಾಖೆಯವರು ತೆಗೆದುಕೊಂಡ ಕಾರ್ಯಕ್ರಮಗಳಾವುವು ?

ಶ್ರೀ ಎಚ್. ಎಂ. ಚನ್ನಬಸಪ್ಪ (ಕಾಮಗಾರಿ ಮತ್ತು ವಿಧ್ಯುಚ್ಛಕ್ತಿ ಮಂತ್ರಿಗಳು). —

ಉತ್ತರ : (ಅ) ಹೌದು.

(ಅ) ಪರಿಶೀಲಿಸಿದ ನೀರಾವರಿ ಕಾಮಗಾರಿಗಳು	ಇಲಾಖೆ ತೆಗೆದುಕೊಂಡ ಕ್ರಮ
ಒಂತಕುಪ್ಪೆಕೆರೆ ಕೋಡಿ ಹಳ್ಳಕ್ಕೆ ಕಟ್ಟಿದ್ದ ಪೈಪು ಕ್ಯಾಸಿಂಗ್ ಪ್ರವಾಹದಿಂದ ಕಿತ್ತು ಹೋಗಿದ್ದು ಕಾಮಗಾರಿ.	ರಿಪೇರಿ ಕೆಲಸ ನಡೆಯುತ್ತಿದೆ.
ಮಂಣ್ಣಗನಹಳ್ಳಿ ಹತ್ತಿರ ಪಿಕ್‌ಅಪ್ ರಿಪೇರಿ ಕೆಲಸ	ರಿಪೇರಿ ಕೆಲಸ ನಡೆಯಂತ್ತಿದೆ.

BUDGET ESTIMATES FOR 1974–75 DEMANDS FOR GRANTS

DEMAND Nos. 5,6 and 36 (Debate Continued)

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನಿನ್ನೆ ರೆವಿನ್ಯೂ ಬೇಡಿಕೆಗಳ ಮೇಲೆ ಮಾನ್ಯಸದಸ್ಯರು ಒಳ್ಳೆಯ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಇರತಕ್ಕ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ಅದಕ್ಕಾಗಿ ನಾನು ಮೊಟ್ಟಮೊದಲು ಅವರನ್ನು ವಂದಿಸುತ್ತೇನೆ. ಈ ಇಲಾಖೆಯ ಬಗ್ಗೆ ಅನೇಕ ಸದಸ್ಯರು ಹೇಳಿದಹಾಗೆ ಮತ್ತು ನಮ್ಮೆಲ್ಲರಿಗೂ ಗೊತ್ತಿರುವಹಾಗೆ ಇದು ಬಹಳಕಾಲದಿಂದ ಬಂದಿರತಕ್ಕಂಥ ಒಂದು ಇಲಾಖೆ. ಹಿಂದೆ ಕಮಿಷನರ್‌ರವರು ಮಹಾರಾಜರ ಪ್ರತಿನಿಧಿ ಎಂದು ಹೇಳುತ್ತಾ ಇರತಕ್ಕಂಥ ಕಾಲ ಇತ್ತು. ಆವರನ್ನಾಗ್ಗೆ ಡಿಸ್ಟ್ರಿಕ್ಟಿನ ದೊರೆಯೆಂದು, ಕರೆಯುತ್ತಿದ್ದರು ಈ ಇಲಾಖೆ ಅಷ್ಟು ಹಳೆಯದು. ಇಲಾಖೆಯು ನಡೆದುಬಂದ ಹಾಗೆ ಅದರಲ್ಲಿ